ಅಂತಾ ಇದ್ವಿ. ಈಗ ನೋಡು ಸಾಧಿಸಿ ಬಿಟ್ಟೇ...!

'ಇದಕ್ಕೂ ನಿನ್ಗೇ ನಮ್ಮ ಸ್ಕೂಲಲ್ಲಿ ವಿಶೇಷ ಸಾಧಕ ಅಂತ ಸನ್ಮಾನ ಮಾಡ್ಬೇಕು ನೋಡು... ಆ ಕ್ಯಾಸೆಟ್ಟೆಲ್ಲ ಎಲ್ಲಿ ಹೋಯ್ತು...?'

'ಯಾವಂಗೆ ಗೊತ್ತು ಮಾರಾಯ .... ಆವಾಗೆಲ್ಲ ಆ ಕ್ಯಾಸೆಟ್ ಪಾರ್ನ್ ಫಿಲಮ್ಮುಗಳಲ್ಲೂ ಒಂದು ಕಥೆ... ಮ್ಯೂಸಿಕ್ಕು...ಈಗಿನ ಥರ ವಲ್ಗಾರಿಟಿ ಇರ್ಲಿಲ್ಲ... ಒಂಥರಾ ಯೇಸ್ತೇಟಿಸಮ್ಮ್ ಇರೋದು...!'

'ಆವಾಗ ವೀಡಿಯೋಸ್ ಅಂತೆಲ್ಲ ಸಣ್ಣ ಸಿನಿಮಾ ಹಾಲುಗಳು ಇರ್ತಾ ಇತ್ತು.... ಕಾಮತ್ ವೀಡೀಯೋಸ್ ಅಂತ ಒಂದು ಇತ್ತಲ್ಲ ಓಣಿಯಲ್ಲಿ....ಡಬ್ಬಲ್ ಫೀಚರ್ ಶೋಸುಗಳು ಇರ್ತಾ ಇದ್ವು ಅಲ್ಲಿ... ಒಂದು ಸೆಕ್ಸ್ ಸಿನಿಮಾ; ಇನ್ನೊಂದ್ ಹಾರರ್ ಸಿನಿಮಾ ಅಂತ ಹಾಕೋರು ಒಂದೇ ರೇಟಿಗೆ...'

'ಹೌದಪ್ಪ ಆ ಓಣೀಲಿ...ಉಚ್ಚೆ ವಾಸ್ನೆ ಸುತ್ತಮುತ್ತ... ಅಲ್ಲಿಗೆ ಬರೋ ಎಷ್ಟೋ ಗಂಡಸ್ರೂ ಅಲ್ಲಿ ಒಳ್ಗೇ ಕೂತು ಜಟ್ಕಾ ಹೊಡ್ಕೋಳ್ತಾ ಇದ್ರು... ಆ ಸಿನಿಮಾಗಳನ್ನು ನೋಡ್ತಾ'

'ಈಗ ಕಾಮತ್ ವೀಡಿಯೋ ಇದ್ಯಾ...ಇನ್ನೂ...?'

'ಇಲ್ಲ ಅಲ್ಲಿ ರಸ್ತೆ ಅಗಲ ಆಗಿ ಅಕ್ಕಪಕ್ಕದ ಹಳೇ ಅಂಗ್ಡಿ ಮನೆಯೆಲ್ಲ ಒಡೆದ್ ಹಾಕಿ ಪೂರಾ ಜನವಸತಿ ಪ್ರದೇಶ ಆಗಿದೆ... ಅಲ್ಲಿಗೆ ಹೋದ್ರೆ ಈ ಜಾಗ ಅಲ್ಲಿತ್ತಾ ಮುಂಚೆ ಅನ್ನೋ ಹಾಗೇ ಬದಲಾವಣೆ'

'ಎಷ್ಟೆಷ್ಟು ಸಿನಿಮಾಗಳು ನೋಡಿದ್ವಿ ಮಾರಾಯ ಅಲ್ಲಿ... ಬರೀ ಸೆಕ್ಸ್ ಸಿನಿಮಾ ಮಾತ್ರ ಅಲ್ಲ... ಬಿ ಸಿನಿಮಾಗಳು, ಹಿಂದಿ ದೆವ್ವದ ಸಿನಿಮಾಗಳು, ಸ್ಯಾಮ್ ರೈಮಿ ಸ್ಪೈಡರ್ ಮ್ಯಾನ್... ಮತ್ತೆ ಎಷ್ಟು ಕ್ರಿಕೆಟ್ ಮ್ಯಾಚ್ ಅಲ್ಲಿ ಹಾಕ್ತಾ ಇದ್ರು...! ಒಂದ್ ಸೆಶನ್ ಆದ್ಮೇಲೆ ಅಲ್ಲಿಂದ ಸೀದಾ ಕೃಷ್ಣ ಭವನಕ್ಕೆ ಹೋಗಿ ಕಾರ್ಕಳ ಕೇಕ್, ದೋಸೆ ತಿಂದು, ಟೀ ಕುಡಿದು ಮತ್ತೆ ಬಂದು ಸೆಕೆಂಡ್ ಸೆಶನ್ನ್ ಕೂರ್ತಾ ಇದ್ವಿ... ಮಳೆ ಬೇರೆ ಬರ್ತಾ ಇರೋದು... '

'ಈಗ ಆ ಕೃಷ್ಣ ಭವನ ಕೂಡ ಇಲ್ಲ... ಒಂದು ಬ್ಯಾಂಕ್ ಆಗಿದೆ ಅದು....'

'ಮೂರೂವರೆ ಆಗ್ತಾ ಬಂತು ಮಾರಾಯ; ಈ ನಾರಾಯಣ ಸುದ್ದಿ ಇಲ್ಲ ಇನ್ನೂ... ಆಮ್ಲೇಟ್ ಭಾಗ್ಯ ಅಂತೂ ಇಲ್ಲ ಅನ್ಸುತ್ತೆ ಇನ್ನು...'

'ಏಯ್ ಆರು ಗಂಟೆಗೆ ವಾಪಾಸ್ಸು ಊರಿಗೆ ಬಸ್ಸಿದೆ... ಹೋಗ್ ಬೇಕು..'

'ಯಾವ್ ಊರಿಗೆ...? ಬೆಂಗ್ಳೂರಿಗೆ ಹೋಗ್ತೀನಿ ಅಂತಾ ಇದ್ದೇ...'

'ಅದೇ ಸುಮಾರ್ ದಿನ ಆಯ್ತು ಈ ಕಡೆ ಹೋಗಿ... ಅದಕ್ಕೆ ಇಲ್ಲಿದ್ದು ಒಂದ್ ದಿನ, ಮತ್ತೆ ಬೆಂಗ್ಳೂರು ಬಸ್ಸು ಹತ್ತೋದು'

'ಆ ನಾಯಿನೂ ನೋಡ್ಕೋ ಸ್ನಾಚ್ ರುಚಿ ನೋಡಿ ಇಲ್ಲಿಲ್ಲೇ ತಿರುಗ್ತಾ ಇದೆ.... ಇನ್ನೊಂದ್ ಚೂರ್ ಹಾಕು...'

'ಬಾ...ಬಾ ತಗೋ ಬಾ...' ಎಂದು ಇನ್ನೊಂದು ಚೂರು ಸ್ನಾಚ್ ಸುರಿದಾಗ ಆ ನಾಯಿ ನಿಷ್ಠಾವಂತ ಕಾರ್ಯಕರ್ತನಂತೆ ಹತ್ತಿರ ಬಂದು ನೆಲ ನೆಕ್ಕಿತು.

'ಆ ಸದಾಶಿವ ಈಗ ಬೀದಿನಾಯಿ ಹಿಡ್ಯೋ ಕೆಲ್ಸ ಮಾಡ್ತಾ ಇದ್ದಾನೆ ಮುನ್ಸಿಪಾಲಿಟೀಲಿ ಮೊನ್ನೆ ಸಿಕ್ಕಿದ್ದ



ಇಲ್ಲಿ...'

'ಈ ನಮ್ಮ ಟೀಚರ್ಸ್ ಅವ್ನ ದಿಕ್ಕ್ ತಪ್ಸಿ ಹಾಳ್ ಮಾಡಿದ್ರು.... ನಮ್ಮ ಶಾಲೆ ನಮ್ಮ ಶಾಲೆ ಅಂದು-ಅಂದು, ಶಾಲೆ ಉದ್ಧಾರಕ್ಕಾಗಿ ಮಣ್ಣು ಹೊರಿಸಿ ಅವ್ನ ಕೈಯಲ್ಲಿ...ಗುದ್ಲಿ ಪಿಕಾಸಿ ಕೊಟ್ಟು ಕೆಲ್ಸ ಮಾಡ್ಸಿ, ಒಂಬತ್ತನೆ ಕ್ಲಾಸಲ್ಲಿ ಅವ್ನ ಫೇಲ್ ಮಾಡ್ಬಿಟ್ರು.... ಎಸ್.ಎಸ್.ಎಲ್.ಸಿ ಲೀ ಸೆಂಟ್ ಪರ್ಸೆಂಟ್ ರಿಸಲ್ಟ್ ಬರ್ಲೀ ಅಂತ... ಒಂದ್ ಹೆಂಗೋ ಪಾಸ್ ಮಾಡಿದ್ರೆ ಹತ್ನೇ ಕ್ಲಾಸಿಗಾದ್ರೂ ಬಂದಿರ್ತಾ ಇದ್ದ ಪಾಪ...'

'ಬೇರೆ ನಮ್ಮ ಆ ಸ್ಕೂಲ್ ಬ್ಯಾಚವ್ರೂ ಕಾಂಟ್ಯಾಕ್ಟ್ ಅಲ್ಲಿ ಇದ್ದಾರ...?'

'ಆ ರಂಜಿತ್ ಅಂತ ಇದನ್ನಲ್ಲ ಅವ್ನು ಫೇಸ್ ಬುಕ್ಕಲ್ಲೇ ಯಾವ್ದೋ ರಾಜಸ್ತಾನಿ ಹುಡ್ಗಿ ಜತೆ ಚಾಟ್ ಮಾಡಿ ಅವ್ಳೇ ಇವ್ನ ಅಲ್ಲಿಗೆ ಓಡಿಸ್ಕೊಂಡ್ ಕರ್ಕೊಂಡ್ ಮದ್ವೆ ಆದ್ಲು...